**ಸಿ ಸಿ ನಂ. 577/2019**

**ಪಿಡಬ್ಲ್ಯೂ - 1 ಟಿ ಆರ್ ದಿನೇಶ್**

**ದಿನಾಂಕ 17-08-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಡಿ ಸಿ ಡಿ ಆರೋಪಿ ಪರ ವಕೀಲರಿಂದ:**

ನನಗೆ ಆರೋಪಿಯು ಹಲವು ವರ್ಷಗಳಿಂದ ಪರಿಚಿತರು ಹಾಗೂ ಅವರು ನನ್ನ ಸ್ನೇಹಿತರು ಸಹ ಆಗಿರುತ್ತಾರೆ. ಆರೋಪಿಗೆ ನನ್ನ ಪರಿಚಯವಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅವರ ಪರಿಚಯವಿರುತ್ತಾರೆ. ನನ್ನನ್ನು ಆರೋಪಿಯು ವಿರಾಜಪೇಟೆಯಲ್ಲಿ ನೋಡಿದ ಪರಿಚಯದ ಹೊರತಾಗಿ ನಾನು ನನ್ನ ಪಿರ್ಯಾದಿನಲ್ಲಿ ತಿಳಿಸಿದಂತೆ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಎರಡು ಲಕ್ಷ ಸಾಲ ಕೊಟ್ಟು ಆ ಬಗ್ಗೆ ಆತ ನಿಪಿ1 ಚೆಕ್ ನ್ನು ನೀಡಿರುತ್ತಾರೆ ಎಂಬುದಾಗಿ ಈ ಪ್ರಕರಣ ಹೂಡಿದ್ದೇನೆ ಎಂದರೆ ಸರಿ. ನಾನು ಆರೋಪಿಗೆ 2019 ನೇ ಇಸವಿಯ ಜನವರಿಗೆ ತಿಂಗಳಲ್ಲಿ ಸಾಲ ನೀಡಿರುತ್ತೇನೆ. ಯಾವ ದಿನಾಂಕ ಎಂದು ನನಗೆ ಈಗ ನೆನಪಿರುವುದಿಲ್ಲ. ಆರೋಪಿಯು ಸಾಲದ ಬಾಬ್ತು ನನಗೆ ವಿರಾಜಪೇಟೆ ಶಾಖೆಯ ಕಾರ್ಪೋರೇಷನ್ ಬ್ಯಾಂಕ್ ಗೆ ಸೇರಿದ ಚೆಕ್ ನ್ನು ನೀಡಿರುತ್ತಾರೆ. ಆರೋಪಿಯು ಆತನ ಖಾತೆಗೆ ಸೇರಿದ ಚೆಕ್ ನ್ನು ನೀಡಿದ್ದಾರಾ ಎಂದರೆ ಸಾಕ್ಷಿಯು ಕಾರ್ಪೋರೇಷನ್ ಬ್ಯಾಂಕ್ ನ ತನ್ನ ಚೆಕ್ ಎಂಬುದಾಗಿ ತಿಳಿಸಿ, ಆರೋಪಿ ನಿಪಿ1 ಚೆಕ್ ನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕ್ ಗೆ ಅದನ್ನು ಸಲ್ಲಿಸಿದಾಗ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ಅದನ್ನು ಬ್ಯಾಂಕ್ ನವರು ಹಿಂತಿರುಗಿಸಿರುತ್ತಾ್ರೆ ಎಂದರೆ ಸರಿ. ನಂತರ ಸದರಿ ಹಣವನ್ನು ನೀಡುವಂತೆ ನಾನು ಆರೋಪಿಗೆ ನೋಟಿಸ್ ನ್ನು ನೀಡಿರುತ್ತೇನೆ ಹಾಗೂ ಅದು ಆತನಿಗೆ ಜಾರಿಯಾಗಿರುತ್ತದೆ ಎಂದರೆ ಸರಿ. ನಾನು ಆ ರೀತಿ ಆರೋಪಿಗೆ ನೋಟಿಸ್ ನ್ನು ನೀಡಿದ ನಂತರ ಆರೋಪಿಯು ನನಗೆ ಸದರಿ ಚೆಕ್ ನನ್ನ ಖಾತೆಗೆ ಸೇರಿದ್ದಲ್ಲ ಹಾಗೂ ತಾನು ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಯಾವುದೇ ಖಾತೆ ಹೊಂದಿಲ್ಲ ಎಂಬಂತೆ ತಿಳಿಸಿ ನನಗೆ ನಿಪಿ5 ರಂತೆ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನನಗೆ ನಿಪಿ1 ಚೆಕ್ ನ್ನು ನೀಡಿರುತ್ತಾನೆ. ನಿಪಿ1 ಚೆಕ್ ಆರೋಪಿಗೆ ಸೇರಿದ್ದಲ್ಲ ಹಾಗೂ ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಆರೋಪಿಗೆ ಯಾವುದೇ ಖಾತೆ ಇರುವುದಿಲ್ಲ ಹಾಗೂ ಆರೋಪಿಯು ನನಗೆ ನಿಪಿ1 ಚೆಕ್ ನ್ನು ನೀಡದೇ ಇದ್ದಾಗಿಯೂ ಸಹ ಆತ ನಿಪಿ1 ಚೆಕ್ ನ್ನು

ನೀಡಿರುತ್ತಾನೆ ಎಂದು ಸುಳ್ಳು ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ಅದು ತನಗೆ ಸೇರಿದ ಚೆಕ್ ಎಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಬ್ಯಾಂಕ್ ನವರು ನೀಡಿದ ನಿಪಿ 2 ಹಿಂಬರಹದಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಕಾರಣವನ್ನು ಬ್ಯಾಂಕ್ ನವರು ನೀಡಿದ್ದು, ಬೇರೆ ಯಾವುದೇ ಕಾರಣ ಅಥವಾ ಹಿಂಬರಹ ನೀಡಿರುವುದಿಲ್ಲ ಎಂದರೆ ಸರಿ. ನಾನು ಬ್ಯಾಂಕ್ ರವರೊಂದಿಗೆ ಶಾಮೀಲಾಗಿ ನನಗೂ ಹಾಗೂ ಬ್ಯಾಂಕ್ ನವರಿಗೆ ನಿಪಿ1 ಚೆಕ್ ಆರೋಪಿಯ ಖಾತೆಗೆ ಸಂಬಂಧಿಸಿದ್ದಲ್ಲ ಎನ್ನುವ ವಿಚಾರ ಗೊತ್ತಿದ್ದಾಗಿಯೂ ಸಹ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲವೆಂಬ ಷರಾವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಚೆಕ್ ನಂತರ ಆರೋಪಿ ನನಗೆ ಯಾವುದೇ ಹಣವನ್ನು ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕಿರುಕುಳ ಕೊಡುವ ಉದ್ದೇಶದಿಂದ ಹಾಗೂ ಆತನಿಗೆ ಮೋಸ ಮಾಡುವ ಸಲುವಾಗಿ ನಾನು ಬ್ಯಾಂಕ್ ನವರೊಂದಿಗೆ ಶಾಮಿಲಾಗಿ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ1 ಚೆಕ್ ನ್ನು ನಗದೀಕರಣಕ್ಕಾಗಿ ವಿರಾಜಪೇಟೆಯ  ಶಾಖೆಯ ನನ್ನ ಖಾತೆ ಇರುವ ಕಾರ್ಪೋರೇಷನ್ ಬ್ಯಾಂಕ್ ಗೆ ಸಲ್ಲಿಸಿರುತ್ತೇನೆ. ನಾನು ಸುಮಾರು ಐದು ವರ್ಷಗಳಿಂದ ಮೇಲೆ ಹೇಳಿದ ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ. ನಾನು ವೃತ್ತಿಯಲ್ಲಿ ಬಾರ್ ನ್ನು ಲೀಸ್ ಗೆ ಕೊಡುವುದು ಹಾಗೂ ಪಿಗ್ಮಿ ಸಂಗ್ರಹಣೆ ಕೆಲಸ ಮಾಡುತ್ತೇನೆ. ಮೇಲೆ ಹೇಳಿದ ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ನಾನು ಮೇಲೆ ಹೇಳಿದ ಐದು ವರ್ಷಗಳಿಂದ ಖಾತೆ ಹೊಂದಿರುವುದರಿಂದ ಅವರ ಜೊತೆ ಅನ್ಯೋನ್ಯವಾಗಿದ್ದು, ಅವರ ಜೊತೆ ಶಾಮೀಲಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-

(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ